# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು– 560113**

**ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ 25/2021–22** **ದಿನಾಂಕ: 04.01.2022**

***ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020–21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಕಂದಾಯ ಅಧಿಕಾರಿ (ಕೆ.ಆರ್.ಪುರ) ರವರು ದಿನಾಂಕ:–04.01.2022 ರಂದು ಹೊರಮಾವು ಉಪ–ವಿಭಾಗದ ರಾಮಮೂರ್ತಿನಗರ ವಾರ್ಡ್–26 ರ ಕಛೇರಿಯಲ್ಲಿ ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.***

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ | ಮೊ.ನಂ |
|---|---|---|---|
| 1 | ಶ್ರೀ.ಬಸವ ಚಾರಿ | ನೋಡಲ್ ಅಧಿಕಾರಿ ವಾರ್ಡ್ ನಂ–26 | |
| 2 | ಶ್ರೀ. ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | 9844587466 |
| 3 | ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ | ಸಹಾಯಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿ ವಾರ್ಡ್ ನಂ–26 | 9739838297 |
| 4 | ಶ್ರೀ. ನವೀನ್ ಕುಮಾರ್ | ಬಿ.ಡ್ಲೂ.ಎಸ್.ಎಸ್.ಬಿ (ಎ.ಇ.ಇ) | 9535544974 |
| 5 | ಶ್ರೀ. ಆನಂದ ಸಜ್ಜನ್ | ಬಿ.ಡ್ಲೂ.ಎಸ್.ಎಸ್.ಬಿ (ಕಿ.ಅ) | 7090216187 |
| 6 | ಶ್ರೀ. ಚಂದ್ರಕಲಾ | ಕಿರಿಯ ಆರೋಗ್ಯ ಪರಿವೀಕ್ಷಕರು | 9620101648 |
| 7 | ಶ್ರೀ.ಚಿಟ್ಟಿಬಾಬು, ಸಹಾಯಕರು, | ಅರಣ್ಯ ಬಿ.ಬಿ.ಎಂ.ಪಿ | 9945430665 |
| | **ಸಾರ್ವಜನಿಕರು** | | |
| 9 | ಶ್ರೀ.ಸತೀಶ್ | ಬಂಜಾರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | – |
| 10 | ಗೋವಿಂದರಾಜು | ರಿಚ್ಚಸ್ ವೆಲ್‌ಫೇರ್ ಅಸೋಸಿಯೇಷನ್ | – |
| 11 | ಶ್ರೀ.ಮೈಕಾಲ್ | ಎನ್.ಆರ್.ಐ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | – |
| 12 | ಗೋವಿಂದರಾಜು | ರಿಚ್ಚಸ್ ವೆಲ್‌ಫೇರ್ ಅಸೋಸಿಯೇಷನ್ | – |
| 13 | ಶ್ರೀ. ಹ್ಯಾರಿ | ಮಂಜುನಾಥ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | – |
| 14 | ಶ್ರೀ. ಪ್ರಶಂತ್ | ಗೊಲ್ಬನ್ ಎನ್‌ಕ್ಲೇವ್ | – |
| 15 | ಶ್ರೀ. ಆನಂದ | ಪುಣ್ಯಭೂಮಿ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | – |
| 16 | ಶ್ರೀ.ಶಂಕರ್ | ಟ್ರೀನಿಟಿ ಎನ್‌ಕ್ಲೇವ್ | – |
| 17 | ಎನ್.ಆರ್.ಐ ಬಡಾವಣೆ | ಸುಜಾತ ಶೆಟ್ಟಿ | – |
| 18 | ಶ್ರೀ. ಜೈ ಕುಮಾರ್ | ಕಾಮದೇನು ಬಡ್ಡಾವಣೆ | – |
| 19 | ಶ್ರೀಮತಿ. ಉಷಾ | ಆದಿತ್ಯ ಬಡಾವಣೆ | – |
| 20 | ಶ್ರೀಮತಿ. ಶೈಲಜಾ | ಸರ್.ಎಂ.ವಿ.ನಗರ | – |
| 21 | ಟಿ. ಆನಂದನ್ | ಟ್ರೀನಿಟಿ ಎನ್‌ಕ್ಲೇವ್ | – |
| 22 | ಎಮ್. ಸಿದ್ದಯ್ಯ | ಟ್ರೀನಿಟಿ ಎನ್‌ಕ್ಲೇವ್ | – |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಗೂಗಲ್ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.26 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

<u>ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:–</u>

<u>ಶಂಕರ್ ಟ್ರೀನಿಟಿ ಎನ್‌ಕ್ಲೇವ್ ಅಸೋಸಿಯೇಷನ್:–</u> ರವರು ಮಾತನಾಡಿ ಟ್ರಿನಿಟಿ ಬಡಾವಣೆಯಲ್ಲಿ ಚರಂಡಿಗಳು ಕೆಲಸವು ಬಾಕಿ ಇದ್ದು ಕೂಡಲೇ ಕೆಲಸವನ್ನು ಮಾಡುವುದಾಗಿ ಸಬೆಯಲ್ಲಿ ತಿಳಿಸಿದರು.

2) ಟ್ರಿನಿಟಿ ಬಡಾವಣೆಯಲ್ಲಿ ಚರಂಡಿಗಳು ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಹೊಸದಾಗಿ ಚರಂಡಿಯನ್ನು ಮಾಡುವುದಾಗಿ ಸಭೆಯಲ್ಲಿ ತಿಳಿಸಿದರು.

ಕ್ರಮ:– ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

<u>ಸತೀಶ್ ಬಂಜಾರ ಕನಕಗಿರಿ ಬಡಾವಣೆ :–</u> ರವರು ಮಾತನಾಡಿ ಬಂಜಾರ ಕನಕಗಿರಿ ಬಡಾವಣೆಯಲ್ಲಿ ಚರಂಡಿಗಳು ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಹೊಸದಾಗಿ ಚರಂಡಿಯನ್ನು ಮಾಡುವುದಾಗಿ ಸಭೆಯಲ್ಲಿ ತಿಳಿಸಿದರು ಎಂದು ಸಬೆಯಲ್ಲಿ ತಿಳಿಸಿದರು.

2) ಬಂಜಾರ ಬಡಾವಣೆಯ 4ನೇ ಅಡ್ಡ ರಸ್ತೆಯಲ್ಲಿ ಬೋರವೆಲ್ ರೀಪೇರಿಯಾಗಿದ್ದು ದಯವಿಟ್ಟು ಸರಿಪಡಿಸಬೇಕೆಂದು ಸಭೆಯು ಸೂಚಿಸಿತು.

<u>ಕ್ರಮ</u>:– ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

<u>ಶ್ರೀ.ಆನಂದ, ಪುಣ್ಯಭೂಮಿ ಬಡಾವಣೆ :–</u> ರವರು ಮಾತನಾಡಿ ಬಡಾವಣೆಯಲ್ಲಿ ಹಲವು ಕಡೆಗಳಲ್ಲಿ ವಿದ್ಯುತ್ ದೀಪ ಇಲ್ಲದೆ ಸಾರ್ವಜನಿಕರಿಗೆ ಓಡಾಡಲು ತುಂಬಾ ಕಷ್ಟಕರವಾಗಿದ್ದು ಇಂದಿನ ಸಬೆಯಲ್ಲಿ ಈಗಾಗಲೇ ವಿಷಯವನ್ನು ತಿಳಿಸಿದ್ದು ಕೂಡಲೇ ವಿದ್ಯುತ್ ದೀಪಗಳನ್ನು ಅಳವಡಿಸುವುದಾಗಿ ಸಬೆಯಲ್ಲಿ ತಿಳಿಸಿದರು.

<u>ಕ್ರಮ</u>:– ಬೆಸ್ಕಾಂ ಅದಿಕಾರಿಗಳು ಸಬೆಗೆ ಗೈರಾಜಾಗಿದ್ದರಿಂದ, ಸಹಾಯಕ ಅಭಿಯಂತರರಾದ ಶ್ರೀ. ವಿಕ್ರಮ್ ಸಜ್ಜನ್ ಶೆಟ್ಟಿ ರವರು ಅಗತ್ಯ ಕ್ರಮವಹಿಸಲು ಬೆಸ್ಕಾಂ ಅದಿಕಾರಿಗಳಿಗೆ ತಿಳಿಸುವುದಾಗಿ ಸಭೆಯು ಸೂಚಿಸಿತು.

<u>ಶ್ರೀ. ಜೈ ಕುಮಾರ್ ಕಾಮದೇನು ಬಡಾವಣೆ :–</u> ರವರು ಮಾತನಾಡಿ ಕಾಮದೇನು ಬಡಾವಣೆಯ ರಸ್ತೆಗಳು ತುಂಬಾ ಹಾಳಾಗಿದ್ದು, ಸಾರ್ವಜನಿಕರಿಗೆ ರಸ್ತೆಯಲ್ಲಿ ಓಡಾಡಲು ಕಷ್ಟಕರವಾಗಿದ್ದು, ಸದರಿ ರಸ್ತೆಯನ್ನು ಕೂಡಲೇ ಕಾಂಕ್ರೀಟ್ ರಸ್ತೆಯನ್ನು ಮಾಡುವುದಾಗಿ ಸಬೆಯಲ್ಲಿ ತಿಳಿಸಿದರು.

<u>ಕ್ರಮ</u>:– ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

2) ಬಡಾವಣೆಯಲ್ಲಿ ಚರಂಡಿಗಳು ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಹೊಸದಾಗಿ ಚರಂಡಿಯನ್ನು ಮಾಡುವುದಾಗಿ ಸಭೆಯಲ್ಲಿ ತಿಳಿಸಿದರು.

<u>ಕ್ರಮ</u>:– ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀಮತಿ. ಶೈಲಜಾ ಸರ್.ಎಂ.ವಿ.ನಗರ :– ರವರು ಮಾತನಾಡಿ ರಸ್ತೆಯ ಕೆಲಸವು ಪ್ರಗತಿಯಲ್ಲಿದ್ದು ರಸ್ತೆಯನ್ನು ಅತಿ ಶೀಘ್ರದಲ್ಲಿ ಮಾಡಬೇಕೆಂದು ಎಂದು ಸಬೆಯಲ್ಲಿ ತಿಳಿಸಿದರು.

ಕ್ರಮ:– ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

2) ಬಡಾವಣೆ ಮುಖ್ಯ ರಸ್ತೆಯಲ್ಲಿ, ಬೀದಿ ದೀಪಗಳು ಇಲ್ಲದೆ ಇರುವುದರಿಂದ ರಾತ್ರಿ ಸಮಯದಲ್ಲಿ ಓಡಾಡಲು ಕಷ್ಟಕರವಾದ್ದರಿಂದ ಕೂಡಲೇ ಬೀದಿ ದೀಪಗಳನ್ನು ಅಳವಡಿಸುವುದಾಗಿ ಸಬೆಯಲ್ಲಿ ತಿಳಿಸಿದರು.

ಕ್ರಮ:– ಬೀದಿ ದೀಪಕ್ಕೆ ಸಂಬಂದಪಟ್ಟವರು ಸಬೆಗೆ ಗೈರಾಜಾಗಿದ್ದರಿಂದ, ಸಹಾಯಕ ಅಭಿಯಂತರರಾದ ಶ್ರೀ. ವಿಕ್ರಮ್ ಸಜ್ಜನ್ ಶೆಟ್ಟಿ ರವರು ಅಗತ್ಯ ಕ್ರಮವಹಿಸಲು ತಿಳಿಸುವುದಾಗಿ ಸಭೆಯು ಸೂಚಿಸಿತು

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ನೋಡಲ್ ಅಧಿಕಾರಿ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.26
ಹಾಗೂ ಕಂದಾಯ ಅಧಿಕಾರಿ
ಕೆ.ಆರ್.ಪುರ ವಿಬಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರು
ಹೊರಮಾವು ವಾರ್ಡ್‌ನಂ.26
ಬಿ.ಬಿ.ಎಂ.ಪಿ